# ಕರ್ನಾಟಕ ಸರ್ಕಾರದ ನಡವಳಿ

ವಿಷಯ: ಶ್ರೀ ಕೃಷ್ಣಮೂರ್ತಿ, ಕಾರ್ಯದರ್ಶಿ ಗೂಳೂರು ಗ್ರಾಮ ಪಂಚಾಯಿತಿ, (ಹೆಗ್ಗೆರೆ ಪ್ರಭಾರ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ), ತುಮಕೂರು ತಾಲ್ಲೂಕು, ತುಮಕೂರು ಜಿಲ್ಲೆ. ಇವರ ವಿರುದ್ಧ ನಡೆಸಲಾದ ಇಲಾಖಾ ವಿಚಾರಣೆ–ಅಂತಿಮ ಆದೇಶ ಹೊರಡಿಸುವ ಬಗ್ಗೆ.

ಓದಲಾಗಿದೆ:

1. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/824/ಗ್ರಾಪಂಕಾ/2016 ದಿನಾಂಕ:22.12.2016.
2. ಅಪರ ನಿಬಂಧಕರು, ಕರ್ನಾಟಕ ಲೋಕಾಯುಕ್ತ ಬೆಂಗಳೂರು ಇವರು ಮಾನ್ಯ ಉಪಲೋಕಾಯುಕ್ತರಿಗೆ ಸಲ್ಲಿಸಿದ ವಿಚಾರಣಾ ವರದಿ ಸಂಖ್ಯೆ:UPLOK-2/DE/ 130/2017/ARE-9 Date:09.03.2018.
3. ಮಾನ್ಯ ಉಪಲೋಕಾಯುಕ್ತರು ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಶಿಫಾರಸ್ಸು ಸಂಖ್ಯೆ: UPLOK-2/DE/ 130/2017/ARE-9 Date:09.03.2018.
4. ಎರಡನೇ ಕಾರಣ ಕೇಳುವ ನೋಟೀಸ್ ಸಂಖ್ಯೆ: ಗ್ರಾಅಪ:824:ಗ್ರಾಪಂಕಾ:2016 ದಿನಾಂಕ:14.05.2018.

## ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ: (1) ರಲ್ಲಿ ಸರ್ಕಾರದ ಆದೇಶದಲ್ಲಿ ಶ್ರೀ ಕೃಷ್ಣಮೂರ್ತಿ, ಕಾರ್ಯದರ್ಶಿ ಗೂಳೂರು ಗ್ರಾಮ ಪಂಚಾಯಿತಿ, (ಹೆಗ್ಗೆರೆ ಪ್ರಭಾರ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ), ತುಮಕೂರು ತಾಲ್ಲೂಕು, ತುಮಕೂರು ಜಿಲ್ಲೆ. ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957 ರ ನಿಯಮ 14–ಎ ಅಡಿಯಲ್ಲಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ: (2) ರಲ್ಲಿ ಅಪರ ನಿಬಂಧಕರು ವಿಚಾರಣೆಗಳು–9, ಕರ್ನಾಟಕ ಲೋಕಾಯುಕ್ತ ಇವರು ಸದರಿಯವರ ವಿರುದ್ಧ ಈ ಕೆಳಕಂಡ ಆರೋಪದ ಮೇಲೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957 ರ ನಿಯಮ 11ರ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಿರುತ್ತಾರೆ.

## "ದೋಷಾರೋಪಣೆ"

ಆಪಾದಿತ ಸರ್ಕಾರಿ ನೌಕರರಾದ ಶ್ರೀ ಕೃಷ್ಣಮೂರ್ತಿ, ಕಾರ್ಯದರ್ಶಿ ಗೂಳೂರು ಗ್ರಾಮ ಪಂಚಾಯಿತಿ, (ಹೆಗ್ಗೆರೆ ಪ್ರಭಾರ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ), ತುಮಕೂರು ತಾಲ್ಲೂಕು, ತುಮಕೂರು ಜಿಲ್ಲೆ ಆದ ನೀವು ಒಕ್ಕೋಡಿ ಗ್ರಾಮದ ಸ.ನಂ.57/1 ರ ವಿಸ್ತೀರ್ಣ 30 ಗುಂಟೆ ಭೂ ಪರಿವರ್ತನಾ ಜಮೀನನ್ನು ತಮಗೆ ಅಧಿಕಾರವಿಲ್ಲದೇ ಇದ್ದರೂ ಲೇಔಟ್ ನಿರ್ಮಾಣ ಮಾಡಲು ಅಕ್ರಮವಾಗಿ ಅನುಮೋದನೆ ನೀಡಿದ್ದಿರಾ ಎಂಬುದಾಗಿ ಆರೋಪಸಿಸಿರುತ್ತಾರೆ.

ಆದ್ದರಿಂದ, ನೀವು ಕರ್ತವ್ಯಲೋಪವೆಸಗಿ ಸರ್ಕಾರಿ ನೌಕರರಿಗೆ ಉಚಿತವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆಯಿಂದ ವರ್ತಿಸಿ ಕರ್ನಾಟಕ ನಾಗರೀಕ ಸೇವಾ ನಿಯಮಗಳು (ನಡತೆ) 1966 ರ ನಿಯಮ 3(1) (i) ರಿಂದ (ii) ರಡಿಯಲ್ಲಿ ದುರ್ನಡತೆಯನ್ನೆಸಗಿದ್ದಿರಿ.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರಲ್ಲಿ ವಿಚಾರಣಾಧಿಕಾರಿಗಳು ತಮ್ಮ ವರದಿಯಲ್ಲಿ ಶ್ರೀ ಕೃಷ್ಣಮೂರ್ತಿ, ಕಾರ್ಯದರ್ಶಿ ಗೂಳೂರು ಗ್ರಾಮ ಪಂಚಾಯಿತಿ, (ಹೆಗ್ಗೆರೆ ಪ್ರಭಾರ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ), ತುಮಕೂರು ತಾಲ್ಲೂಕು, ತುಮಕೂರು ಜಿಲ್ಲೆ ಇವರ ವಿರುದ್ಧದ ಆರೋಪವು ಸಾಬೀತಾಗಿದೆಯೆಂದು ನಿರ್ಣಯಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (3) ರಲ್ಲಿ ವಿಚಾರಣಾಧಿಕಾರಿರವರ ವರದಿಯನ್ನು ಉಪಲೋಕಾಯುಕ್ತರು ಅಂಗೀಕರಿಸಿ ಸದರಿಯವರ ವಿರುದ್ಧದ ಕರ್ತವ್ಯಲೋಪ ಆರೋಪವು ಸಾಬೀತಾಗಿರುವುದರಿಂದ ಇವರಿಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ) ನಿಯಮ 1957 ರ ನಿಯಮದಡಿ ನಿರ್ಧಿಷ್ಟಪಡಿಸಿದಂತೆ ಸದರಿಯವರ 4 ವಾರ್ಷಿಕ ವೇತನ ಬಡ್ತಿಗಳನ್ನು ಸಂಚಿತ ಪರಿಣಾಮದೊಂದಿಗೆ ಕಡಿತಗೊಳಿಸುವ ದಂಡನೆ ವಿಧಿಸಲು ಶಿಫಾರಸ್ಸು ಮಾಡಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (4) ರಲ್ಲಿ ಶ್ರೀ ಕೃಷ್ಣಮೂರ್ತಿ, ಕಾರ್ಯದರ್ಶಿ ಗೂಳೂರು ಗ್ರಾಮ ಪಂಚಾಯಿತಿ, (ಹೆಗ್ಗೆರೆ ಪ್ರಭಾರ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ), ತುಮಕೂರು ತಾಲ್ಲೂಕು, ತುಮಕೂರು ಜಿಲ್ಲೆ, ಇವರಿಗೆ ನಿಯಮಾನುಸಾರ ಸರ್ಕಾರದ ಪತ್ರದಲ್ಲಿ ವಿಚಾರಣಾಧಿಕಾರಿಯವರ ವರದಿ ಮತ್ತು ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸಿನ ಪ್ರತಿಯೊಂದಿಗೆ ಎರಡನೇ ಕಾರಣ ಕೇಳುವ ನೋಟೀಸ್ಸನ್ನು ಜಾರಿಗೊಳಿಸಲಾಗಿರುತ್ತದೆ. ಆದರೆ ಸದರಿ ಎರಡನೇ ಕಾರಣ ಕೇಳುವ ನೋಟೀಸ್ಸಿಗೆ ಸಮಜಾಯಿಷಿಯನ್ನು ನೀಡಿರುವುದಿಲ್ಲ.

ವಿಚಾರಣಾಧಿಕಾರಿಯವರ ವರದಿಯನ್ನು ಪರಿಶೀಲಿಸಲಾಗಿ ವಿಚಾರಣಾಧಿಕಾರಿಯವರು ತಮ್ಮ ನಿರ್ಣಯ ಹಾಗೂ ವರದಿಯನ್ನು ದಾಖಲಿಸಿದ್ದು ಅದರ ಸಂಕ್ಷಿಪ್ತ ಸಾರಾಂಶ ಈ ಕೆಳಕಂಡಂತಿದೆ.

The Ex.P11 is the comments along with documents submitted by the DGO. He admitted the approved the layout plan in respect of the Sy.No.57/1 of Vokkodi Village as pe the gram panchayth resolution dated 15.09.2011. Considering the above said all documents, as per the Ex.P4 the said Vokkodi village comes under the limits of the Tumur urban Develpoment Authority and the Tumkur Town unban DEvelpoment Authority and the Tumkur Town planning authority is the authority to approve the layout plan in respect of the said survey number and the DGO has no authority to approve the layout plan in respect of the said survey number and the DGO has no authority to approve the layout plan in respect of the said survey number. It is clear that the DGO without having any power he has approved the layout plan along with the Gram Panchayath proceedings in respect of the Sy. No. 57/1 measuring 30 guntas of Vokkodi Village. Thereby the disciplinary authority succeeded to prove the chaged against the DGO.

In The event of the above circumstances, the charge leveled against the DGO is proved.

ಸರ್ಕಾರವು ಆಪಾದಿತರು 2ನೇ ಕಾರಣ ಕೇಳುವ ನೋಟೀಸ್ಸನ್ನು ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯಿತಿ ತುಮಕೂರು, ರವರ ಮುಖಾಂತರ ಆರೋಪಿತರಿಗೆ ಜಾರಿ ಮಾಡಲಾಗಿದ್ದರೂ ಯಾವುದೇ ಲಿಖಿತ ಹೇಳಿಕೆ ನೀಡಿರುವುದಿಲ್ಲ. ಮತ್ತು ವಿಚಾರಣಾ ನಡವಳಿ, ದಾಖಲೆಗಳು ಮತ್ತು ಸಾಕ್ಷ್ಯಾಧಾರಗಳನ್ನು ವಿವರವಾಗಿ ಪರಿಶೀಲಿಸಿದೆ.

ವಿಚಾರಣಾಧಿಕಾರಿಯವರು ವಿವರವಾದ ಸಮರ್ಥನೆಯೊಂದಿಗೆ ಆರೋಪವನ್ನು ಸಾಬೀತುಪಡಿಸಿರುತ್ತಾರೆ. ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತರು ಅಂಗೀಕರಿಸಿರುತ್ತಾರೆ ಮತ್ತು ಸದರಿಯವರ ವಿರುದ್ಧದ ದುರ್ನಡತೆ ಆರೋಪವು ಸಾಬೀತಾಗಿರುವುದರಿಂದ ಈ ಕೆಳಂಕಂಡ ದಂಡನೆ ವಿಧಿಸಲು ಶಿಫಾರಸ್ಸು ಮಾಡಿರುತ್ತಾರೆ.

Having regard to the nature of charge 'proved' against DGO Shri Krishnamurthy, Secretary, Gulur Gram Panchayth, (In charge Heggere Gram Panchayath) Tumkur Taluk & District, it is hereby recommended to the Government to impose penlty of **'withholding four annual increments payable to DGO Sri Krishanamurty with cumulative effect'**

ಸರ್ಕಾರವು ಎಲ್ಲಾ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿದ್ದು, ಶ್ರೀ ಕೃಷ್ಣಮೂರ್ತಿ, ಕಾರ್ಯದರ್ಶಿ ಗೂಳೂರು ಗ್ರಾಮ ಪಂಚಾಯಿತಿ. (ಹೆಗ್ಗೆರೆ ಪ್ರಭಾರ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ).

ರವರ ಮೇಲಿನ ಆರೋಪವು ಸಾಬೀತಾಗಿದೆ ಎಂದು ವಿಚಾರಣಾಧಿಕಾರಿಗಳು ತಿಳಿಸಿರುವುದರಿಂದ ಸದರಿ ವಿಚಾರಣಾ ಹಿನ್ನೆಲೆಯಲ್ಲಿ ಆರೋಪಿತರಿಗೆ ಎರಡನೇ ಕಾರಣ ಕೇಳುವ ನೋಟೀಸನ್ನು ಜಾರಿಗೊಳಿಸಲಾಗಿದ್ದು, ಸದರಿ ನೋಟೀಸ್ಸಿಗೆ ಲಿಖಿತ ಸಮಜಾಯಿಷಿಯನ್ನು ನೀಡದೆ ಇರುವುದರಿಂದ ಸರ್ಕಾರವು ವಿಚಾರಣಾ ವರದಿ ಮಾನ್ಯ ಉಪಲೋಕಾಯುಕ್ತರ ನಿರ್ಣಯವನ್ನು ಅಂಗೀಕರಿಸಿದೆ ಮತ್ತು ಮಾನ್ಯ ಉಪಲೋಕಾಯುಕ್ತರು ಶಿಫಾರಸ್ಸು ಮಾಡಿರುವಂತೆ, ಶ್ರೀ ಕೃಷ್ಣಮೂರ್ತಿ, ಕಾರ್ಯದರ್ಶಿ ಗೂಳೂರು ಗ್ರಾಮ ಪಂಚಾಯಿತಿ, (ಹೆಗ್ಗೆರೆ ಪ್ರಭಾರ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ), ಇವರಿಗೆ ದಂಡನೆ ವಿಧಿಸಿ ಅದರಂತೆ ಈ ಆದೇಶ.

<u>ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ:824:ಗ್ರಾಪಂಕಾ2016 ಬೆಂಗಳೂರು, ದಿನಾಂಕ-23-11-2018.</u>

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಸರ್ಕಾರವು, ಶ್ರೀ ಕೃಷ್ಣಮೂರ್ತಿ, ಕಾರ್ಯದರ್ಶಿ ಗೂಳೂರು ಗ್ರಾಮ ಪಂಚಾಯಿತಿ, (ಹೆಗ್ಗೆರೆ ಪ್ರಭಾರ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ), ತುಮಕೂರು ತಾಲ್ಲೂಕು, ತುಮಕೂರು ಜಿಲ್ಲೆ ಇವರಿಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ) ನಿಯಮ 1957 ರ ನಿಯಮದಡಿ ನಿರ್ದಿಷ್ಟಪಡಿಸಿದಂತೆ ಸದರಿಯವರ 4 ವಾರ್ಷಿಕ ವೇತನ ಬಡ್ತಿಗಳನ್ನು ಸಂಚಿತ ಪರಿಣಾಮದೊಂದಿಗೆ ಕಡಿತಗೊಳಿಸುವ ದಂಡನೆ ವಿಧಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

23/11

(ಮುಬಾರಕ್ ಅಹ್ಮದ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಗೆ,

1. ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು.
2. ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ತುಮಕೂರು ಜಿಲ್ಲೆ.
5. ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತಿ ತುಮಕೂರು, ತುಮಕೂರು ಜಿಲ್ಲೆ.
6. ಶ್ರೀ ಕೃಷ್ಣಮೂರ್ತಿ, ಕಾರ್ಯದರ್ಶಿ ಗೂಳೂರು ಗ್ರಾಮ ಪಂಚಾಯಿತಿ, (ಹೆಗ್ಗೆರೆ ಪ್ರಭಾರ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ), ತುಮಕೂರು ತಾಲ್ಲೂಕು, ತುಮಕೂರು ಜಿಲ್ಲೆ.
7. ಗಣಕ ಕೋಶ.
8. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.